ಶಾಲೆಗಳಿಗೆ (8ನೇ ತರಗತಿ) ಸೇರಿಸಿದಾಗ, ವಿಜ್ಞಾನ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಿ ಭರ್ತಿ ಮಾಡಲು ಸರ್ವ ಶಿಕ್ಷಣ ಅಭಿಯಾನದಡಿ ಅನುಮತಿ ನೀಡಿದೆ ಈ ಶಾಲೆಗಳಿಗೆ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಗ್ರೇಡ್–2 ವೃಂದದವರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ

ಆ) ಈ ಶಿಕ್ಷಕರಿಗೆ ಗೌರವ ಧನವನ್ನು ನೀಡುತ್ತಿಲ್ಲ ಆದರೆ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಗ್ರೇಡ್–2 ವೃಂದದ ಶಿಕ್ಷಕರಿಗೆ ನೀಡುತ್ತಿರುವ ವೇತನದಂತೆ ಸರ್ವ ಶಿಕ್ಷಣ ಅಭಿಯಾನದಡಿ ನೇಮಕಾತಿ ಹೊಂದಿದ ಶಿಕ್ಷಕರಿಗೆ ಯೋಜನೆಯಡಿ ವೇತನವನ್ನು ಪಾವತಿಸಲಾಗುತ್ತಿದೆ ಈ ಯೋಜನೆ ಮುಗಿದ ನಂತರ ಶಿಕ್ಷಕರಿಗೆ ರಾಜ್ಯ ಸರ್ಕಾರದಿಂದ ವೇತನವನ್ನು ಪಾವತಿ ಮಾಡಲಾಗುತ್ತದೆ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ಶ್ರೇಣಿ 3300–6300 ರಂತೆ ವೇತನ ನೀಡಲಾಗುತ್ತಿದೆ

ಇ) ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ 10433 ಪ್ರಾಥಮಿಕ ಹಾಗೂ 5356 ತರಬೇತಿ ಹೊಂದಿದ ಪದವೀಧರ (ಟಿ ಜಿ ಟಿ) ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ

461(455) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಹಾಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು),

ಆ) ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಉ) * ಪ್ರಸ್ತುತ ರಾಜ್ಯದಲ್ಲಿ 8,379 ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ (ಜಿಲ್ಲಾವಾರು ವಿವರದ ಪಟ್ಟಿ ಲಗತ್ತಿಸಿದೆ)

* ರಾಜ್ಯದಲ್ಲಿ 5,984 ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ (ಜಿಲ್ಲಾವಾರು ವಿವರದ ಪಟ್ಟಿ ಲಗತ್ತಿಸಿದೆ)

ಆ) * ದಿ 11 01 2007 ರಂದು 7,753 ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕಾತಿ ಮಾಡುವ ಸಲುವಾಗಿ ಅಧಿಸೂಚನೆ ಹೊರಡಿಸಲಾಗಿದೆ ಇದರ ಜೊತೆಗೆ ದಿ 01 02 2007 ರಂದು 626 ವಿಶೇಷ ಶಿಕ್ಷಕರು (ದೈಹಿಕ, ಸಂಗೀತ ಮತ್ತು ಚಿತ್ರಕಲೆ) ಶಿಕ್ಷಕರುಗಳನ್ನು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ನೇಮಕಾತಿ ಮಾಡುವ ಸಲುವಾಗಿ ಅಧಿಸೂಚನೆ ಹೊರಡಿಸಲಾಗಿದೆ

* ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 5,984 ಹುದ್ದೆಗಳಿಗೆ ದಿನಾಂಕ 25/26 11 2006 ರಂದು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದೆ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಸದ್ಯದಲ್ಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು

ಜಿಲ್ಲಾವಾರು ಮಾಹಿತಿಯ ಪಟ್ಟಿ

ಕ್ರ. ಸಂ	ಜಿಲ್ಲೆಯ ಹೆಸರು	ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು		ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು
		ಸಾಮಾನ್ಯ ಶಿಕ್ಷಕರು	ವಿಶೇಷ ಶಿಕ್ಷಕರು	
1	ಬೆಂಗಳೂರು ಉತ್ತರ	–	16	51
2	ಬೆಂಗಳೂರು ದಕ್ಷಿಣ	63	15	120
3	ಬೆಂಗಳೂರು ಗ್ರಾಮಾಂತರ	517	28	214
4	ಕೋಲಾರ	201	11	128
5	ಚಿಕ್ಕಬಳ್ಳಾಪುರ	262	19	160
6	ತುಮಕೂರು	143	–	97
7	ಮಧುಗಿರಿ	124	11	109
8	ಶಿವಮೊಗ್ಗ	229	32	206
9	ಚಿತ್ರದುರ್ಗ	294	11	132

ಕ್ರ ಸಂ	ಜಿಲ್ಲೆಯ ಹೆಸರು	ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು		ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು
		ಸಾಮಾನ್ಯ ಶಿಕ್ಷಕರು	ವಿಶೇಷ ಶಿಕ್ಷಕರು	
10	ದಾವಣಗೆರೆ	89	23	213
11	ಮೈಸೂರು	375	17	251
12	ಚಾಮರಾಜನಗರ	127	10	161
13	ಮಂಡ್ಯ	50	14	165
14	ಹಾಸನ	174	–	201
15	ಚಿಕ್ಕಮಗಳೂರು	68	36	118
16	ಕೊಡಗು	145	18	50
17	ದಕ್ಷಿಣ ಕನ್ನಡ	180	35	187
18	ಉಡುಪಿ	16	–	77
19	ಬೆಳಗಾವಿ	410	35	201
20	ಚಿಕ್ಕೋಡಿ	397	37	260
21	ಬಿಜಾಪುರ	189	08	307
22	ಬಾಗಲಕೋಟೆ	189	34	278
23	ಧಾರವಾಡ	147	21	222
24	ಗದಗ	201	08	169
25	ಹಾವೇರಿ	150	10	113
26	ಉತ್ತರ ಕನ್ನಡ	208	01	28
27	ಗುಲ್ಬರ್ಗಾ	596	29	376
28	ಯಾದಗಿರಿ	366	13	176
29	ಬಳ್ಳಾರಿ	452	37	300

ಕ್ರ. ಸಂ	ಜಿಲ್ಲೆಯ ಹೆಸರು	ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು		ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು
		ಸಾಮಾನ್ಯ ಶಿಕ್ಷಕರು	ವಿಶೇಷ ಶಿಕ್ಷಕರು	
30	ರಾಯಚೂರು	692	39	227
31	ಕೊಪ್ಪಳ	367	45	150
32	ಬೀದರ್	332	13	293
	ಒಟ್ಟು	**7,753 +**	**626=8,379**	**5,984**

462(456) ಶ್ರೀ ಚನ್ನಬಸವರಾಜ್ (ಅವ್ವಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮುದ್ದೇಬಿಹಾಳ ಮತ್ತು ತಾಳಿಕೋಟೆ ಕೇಂದ್ರಸ್ಥಾನಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ 2007-08ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ತಾಲ್ಲೂಕು ಕೇಂದ್ರ ಹಾಗೂ ತಾಳಿಕೋಟೆ ಪಟ್ಟಣದಲ್ಲಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಯೋಜಿಸಿದೆಯೇ?

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೌದು

ಆ) ಮುದ್ದೇಬಿಹಾಳದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಇರುವುದಿಲ್ಲ ತಾಳಿಕೋಟೆಯು ಹೋಬಳಿ ಕೇಂದ್ರವಾಗಿದ್ದು, 02 ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳು ಇರುತ್ತವೆ ಶೈಕ್ಷಣಿಕ ಅಗತ್ಯತೆ, ಆಯವ್ಯಯದಲ್ಲಿನ ಹಣಕಾಸಿನ ಲಭ್ಯತೆ ಹಾಗೂ ಡಾ ನಂಜುಂಡಪ್ಪನವರ ವರದಿಯನ್ವಯ ಮುದ್ದೇಬಿಹಾಳ ತಾಲ್ಲೂಕು ಕೇಂದ್ರಕ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು